ಎರಡನೆಯವನು ಹಿಂಜರಿಯುವವ, ಭಯವಿರುವ ವ್ಯಕ್ತಿ... ಆ ಮೊದಲನೆಯವನಿಗೇ ಮುಂಜಾಗ್ರತಾ ಕ್ರಮಗಳನ್ನು ಕಲಿಸಿದರೆ ಈ ಅಪಘಾತಗಳಾಗುತ್ತಿರಲಿಲ್ಲವೇನೋ.'

'ನಾವೇನು ಕೈ ಕಟ್ಟಿ ಕುಳಿತಿದ್ದೇವೆಂದು ಭಾವಿಸಿದಿರಾ ಮ್ಯಾಮ್... ಒಂದ್ಸಲ ನನ್ನೊಂದಿಗೆ ಚಾಲಕ ತರಬೇತಿ ಕೇಂದ್ರಕ್ಕೆ ಬನ್ನಿ. ಅದಕ್ಕೂ ಮೊದಲು ಇಲ್ಲಿರುವ ಗಾಯಾಳುಗಳು ಸಹಜ ಸ್ಥಿತಿಗೆ ಬರಲಿ. ಅನಂತರ ಹೋದರಾಯಿತು...' ಎಂದಾಗ ಕೊಂಚ ರೇಗಿದಂತೆ ಕಾಣಿಸಿದ ಅವನನ್ನು ಮತ್ತೆ ಕಾಲೆಳೆಯುವ ಮನಸ್ಸಾಗಿತ್ತವಳಿಗೆ.

'ನಮ್ಮಂಥವರಿಗೆ ದೂರದ ಬೆಟ್ಟ ನುಣ್ಣಗೆ ಕಾಣಿಸುತ್ತದೆ ಅವಿರತ್. ಎಲ್ಲದರ ಸಮೀಪ ದರ್ಶನ ನಿಮ್ಮಿಂದಾಗಬೇಕಿದೆಯಷ್ಟೇ.'

'ಸಮೀಪ ದರ್ಶನ ಮಾಡಿಸಲು ನಾನೇನು ಮಹಾಭಾರತ ಕಾಲದ 'ಸಂಜಯ' ಎಂದುಕೊಂಡಿರಾ. ಆಫ್ಟರಾಲ್ ನಾನೊಬ್ಬ ಸಂಚಾರ ಇಂಜಿನೀಯರ್...'

ಅವನು ನಾಟಕೀಯವಾಗಿ ಮಾತನಾಡಿದಾಗ 'ಟ್ರಾಮಾ ಸೆಂಟರ್'ನ ಹೊರಗಿನ ಆವರಣದಲ್ಲಿ ನಿಲುಗಡೆಗೊಳಿಸಿದ ತನ್ನ ವಾಹನದ ಬಳಿ ಹೋಗಲು ಎದ್ದಳು. ಅವರು ರೊಬೋ ಮಾಣಿಯಿಂದ ತರಿಸಿಕೊಂಡ ಪಾನೀಯ ಹಾಗೂ ತಿನಿಸನ್ನು ಸೇವಿಸಿದ ಬಳಿಕ ಅದರ ಗ್ಲಾಸ್ ಹಾಗೂ ಸಣ್ಣ ಪ್ಲೇಟ್ ಸಹ ತಿನಿಸಿನಿಂದ ಮಾಡಿದ್ದಾಗಿದ್ದು, ಅದನ್ನೂ ಬಿಸ್ಕತ್‌ನಂತೆ ಕಚ್ಚಿ ಸೇವಿಸಿದ್ದರು.

'ನಿಮ್ಮ ಆತಿಥ್ಯಕ್ಕೆ ಧನ್ಯವಾದಗಳು ಅವಿರತ್. ನಾನಿನ್ನು ಹೊರಡಬಹುದೇ...?' ಎಂದು ಅವನ ಅಪ್ಪಣೆ ಕೇಳಿದಾಗ ಅವಿರತ್ ಅವಳೊಂದಿಗೆ ಮತ್ತಷ್ಟು ಸಮಯವನ್ನು ಕಳೆಯುವ ಮನಸ್ಸಿದ್ದರೂ, ತೋರ್ಪಡಿಕೆಯ ನಸುನಗುವನ್ನು ಹೊರಸೂಸುತ್ತಾ ಅವಳ ಕೈ ಕುಲುಕಿ 'ಶ್ಯೂರ್... ಬಾಯ್' ಎಂದು ವಿದಾಯ ಹೇಳಿದ.

ಅವನ ಕೈ ಸ್ಪರ್ಶದಲ್ಲಿನ ಮೃದುತನ ಬೆಚ್ಚನೆಯ ಅನುಭವ ನೀಡಿತ್ತು.

* * *

ಹನ್ಸಾ ಅಂದು ವಾಣಿಜ್ಯ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳು ನಿಲುಗಡೆಯಾಗದಂತೆ ನೋಡಿಕೊಳ್ಳುತ್ತಾ ನಿಧಾನವಾಗಿ ಪಥದ ಎಡಗಡೆ ಪೆಟ್ರೋಲಿಂಗ್ ಮಾಡುತ್ತಿದ್ದಾಗ ಯಾರೋ ಹದಿನೇಳು, ಹದಿನೆಂಟು ವರ್ಷದವನೆಂದು ಹೇಳಬಹುದಾದ ಬಾಲಕ ತನ್ನ ಹೆಗಲ ಹಿಂದೆ ತೂಗು ಬ್ಯಾಗನ್ನು ನೇತು ಹಾಕಿಕೊಂಡು ದ್ವಿಚಕ್ರ ವಾಹನದಲ್ಲಿ ಗಂಟೆಗೆ ಸುಮಾರು 100 ಕಿ.ಮೀ.ಗೂ ಅಧಿಕ ವೇಗದಲ್ಲಿ ಕ್ಷಣಾರ್ಧದಲ್ಲಿ ನುಗ್ಗಿರುವುದನ್ನು ನೋಡಿ ಮುಂದಿನ ಸಿಗ್ನಲ್‌ನಲ್ಲಿರುವವರಿಗೆ ಆ ಬೈಕ್‌ನ ಚಹರೆ, ಬಣ್ಣ ಹಾಗೂ ಇತರೆ ಗುರುತುಗಳನ್ನು ತಿಳಿಸಿ, ಅದನ್ನು ತಡೆಯುವಂತೆ ಎಂ.ಪಿ. ವಾಕಿಯಲ್ಲಿ ಸೂಚಿಸಿದಳು.

ಕೆಲವು ನಿಮಿಷಗಳಲ್ಲಿ ಅತ್ತಲಿಂದ ಮತ್ತೊಬ್ಬ ಸಂಚಾರ ವಾರ್ಡನ್ ಅನಘಾಳ ಧ್ವನಿ ಕೇಳಿಸಿತ್ತು. 'ಆಸಾಮಿ ಹಿಡಿದಿದ್ದೀವಿ. ನೀನಿಲ್ಲಿಗೆ ಬರ್‍ತಿದ್ದೀ ಏನು?'

'ನೀನೇ ಆತನಿಗೆ ದಂಡ ವಿಧಿಸುವುದಾದರೆ ನೋಡು...' ಎಂದು ತನ್ನ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳಲ್ಲಿ ಸಂಚರಿಸತೊಡಗಿದಳು. ಸಂಜೆಯ ತುತ್ತತುದಿಯ ಸಮಯದಲ್ಲಿನ ಜನದಟ್ಟನೆಗೆ ಹಲವಾರೆಡೆ ನಿಲುಗಡೆ ತಾಣಗಳನ್ನು ನಿಗದಿಪಡಿಸಿದರೂ ಆತುರದ ಜನರಿಗೆ ವಾಣಿಜ್ಯ ಕಟ್ಟಡಗಳ ಎದುರುಗಡೆಯೇ ಇಳಿಯಬೇಕೆಂಬ ಆತುರ.

ಬಿಜಿನೆಸ್ ಹಾಗೂ ಎಕ್ಸಿಕ್ಯೂಟಿವ್ ಕ್ಲಾಸ್ ಮಂದಿ ತಮ್ಮ ಗಡಿಬಿಡಿಯ ಜೀವನಶೈಲಿಗೆ ಸರಿಹೊಂದುವ ರೊಬೋ ಕಾರ್‌ನ್ನು ಖರೀದಿಸಿ ರಸ್ತೆಗಿಳಿದಿದ್ದರೆ, ಮತ್ತೆ ಕೆಲವರು ಚಾಲನೆಯ ಥ್ರಿಲ್ ಅನ್ನು ಬೇರೆಯವರಿಗೆ ಬಿಟ್ಟುಕೊಡಲು ಮನಸ್ಸಾಗದೆ ತಾವೇ ಅರೆ ಆಟೋಮೇಟೆಡ್ ಕಾರ್‌ಗಳನ್ನು ಚಲಾಯಿಸುತ್ತಿದ್ದರು. ಮೊದಲನೆಯ ವರ್ಗದವರು ಹೆಚ್ಚು ಜನಸಂದಣಿ ಹಾಗೂ ತಿರುವುಗಳಿರುವ ರಸ್ತೆಗೆ ಈ ಬಗೆಯ ವ್ಯವಸ್ಥೆ ಮಾಡಿಸಿದರೆ ಎರಡನೆಯ ವರ್ಗದವರು ಹೆಚ್ಚು ನೇರ ರಸ್ತೆಗಳಿದ್ದು ಕಡಿಮೆ ವಾಹನಗಳ ಓಡಾಟವಿರುವ ಕಡೆಗೆ ಸಂಚರಿಸುವವರಾಗಿದ್ದರು.

ಹನ್ಸಾಳ ಸಹಾಯಕ ರೊಬೋಗಳು ವಾಣಿಜ್ಯ ಕಟ್ಟಡಗಳ ಆಸುಪಾಸಿನಲ್ಲೇ ನಿಲ್ಲಿಸಲಾಗುತ್ತಿದ್ದ ವಾಹನಗಳ ತೆರವು ಕಾರ್ಯಕ್ಕೆ ತೊಡಗಿದ್ದವು. ಅವಳ ಎಂ.ಪಿ. ವಾಕಿಯ ಮಾನಿಟರ್ ಅನ್ನು ಕೊಂಚ ವಿಸ್ತರಿಸಿ ಅದರಲ್ಲಿ ಸಾಗುತ್ತಿದ್ದ ವಾಹನಗಳ ವೇಗವನ್ನು ಫುಟ್‌ಪಾತ್‌ನಲ್ಲಿ ನಿಂತುಕೊಂಡು ವೀಕ್ಷಿಸುತ್ತಿದ್ದಳು. ಈ ಕೆಲಸವನ್ನು ನಿತ್ಯ ಅರ್ಧ ತಾಸಾದರೂ ಮಾಡುವುದರಿಂದ ವೇಗ ಚಾಲನೆಯಿಂದಾಗುವ ಘರ್ಷಣೆ ತಪ್ಪುತ್ತಿತ್ತು. ಅವಳು ನೋಡನೋಡುತ್ತಿದ್ದಂತೆಯೇ ಫುಟ್‌ಪಾತ್‌ನ ಒಂದೆಡೆ ಕಾಲಿಲ್ಲದ ಅಂಗವಿಕಲನೊಬ್ಬ ತೆವಳಿಕೊಂಡು ಅವಳ ಸಮೀಪಕ್ಕೆ ಆಗಮಿಸಿದ್ದ. ಅದನ್ನು ಗಮನಿಸಿದ ಸಹಾಯಕ ರೊಬೋ ಹನ್ಸಾಳನ್ನು ಎಚ್ಚರಿಸಿತ್ತು.

'ಹನ್ಸ್. ಅಪರಿಚಿತನೊಬ್ಬ ನಿನ್ನ ಹತ್ತಿರ ಬರುತ್ತಿದ್ದಾನೆ', ಎಂದು ತನ್ನ ಕಂಚಿನ ಕಂಠದಲ್ಲಿ ಎಚ್ಚರಿಸಿದಾಗ ಬೆಚ್ಚಿದ ಹನ್ಸಾ ಸುತ್ತಲೂ ನಿರುಕಿಸಿ ಕಡೆಗೆ ತನ್ನ ಕಾಲ್ಗಳ ಬದಿಗೆ ದೃಷ್ಟಿ ನೆಟ್ಟಳು.

ಈ ವಿಶೇಷ ಚೇತನರು ಹಾಗೂ ಭಿಕ್ಷುಕರು ರಸ್ತೆ ಆಕ್ರಮಿಸುವುದನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತಂದರೂ ಅಲ್ಲೊಬ್ಬರು ಇಲ್ಲೊಬ್ಬರು ಹೀಗೆ ಪಾದಚಾರಿ ರಸ್ತೆಗಳಲ್ಲಿ ಸ್ವತಂತ್ರವಾಗಿ ಓಡಾಡುತ್ತಿದ್ದುದುಂಟು.

'ಹೇಯ್... ಜೆಂಟಲ್‌ಮ್ಯಾನ್. ಇದೇನು ರಸ್ತೆಯಲ್ಲಿ ಕಾಣಿಸಿಕೊಂಡಿದ್ದೀರಿ. ಇದು ಪಾದಚಾರಿಗಳಿಗಾಗಿ ಇರುವುದೆಂದು ನಿಮಗೆ ತಿಳಿದಿಲ್ಲವೇ...?'

'ಮ್ಯಾಮ್, ನನಗೆ ಕಾಲಿಲ್ಲವೆಂದು ಕಾಲಿರುವವರಿಗಷ್ಟೇ ರಸ್ತೆ ಎಂದು ಹೀಗಳೆಯುತ್ತಿರುವಿರಾ...' ಅವನ ಪ್ರತ್ಯುತ್ತರಕ್ಕೆ ಕಕ್ಕಾಬಿಕ್ಕಿಯಾಗುವ ಸರದಿ ಹನ್ಸಾಳದಾಗಿತ್ತು.

'ಅರೆ... ಜೆಂಟಲ್‌ಮ್ಯಾನ್... ಪಾದಚಾರಿಗಳು ಮೇಲೆ ನೋಡಿಕೊಂಡು ನಡೆದಾಡುವ ಈ ವಿಶಾಲ ಫುಟ್‌ಪಾತ್‌ನಲ್ಲಿ ನೀವು ಕೆಳಗೆ ತೆವಳಿಕೊಂಡು ನಡೆಯುತ್ತಿದ್ದರೆ ಜನರಿಗೆ ಗೊತ್ತಾಗುವುದು ಹೇಗೆ? ಅವರ ಕಾಲ್ಗಳ ಮಧ್ಯೆ ನೀವು ಸಿಕ್ಕಿಹಾಕಿಕೊಳ್ಳುವಿರಷ್ಟೇ.'

ಅವಳ ಕಾಳಜಿಯನ್ನು ಅವನು ಒಂದಿಂಚೂ ಗಣನೆಗೆ ತೆಗೆದುಕೊಳ್ಳದೆ ಸಾರಾಸಗಟಾಗಿ ನಿರಾಕರಿಸಿಬಿಟ್ಟಿದ್ದ.

'ಮ್ಯಾಮ್... ನಾವು ರಸ್ತೆಯ ಮೇಲೆ ಹೋಗಬಾರದೆನ್ನುತ್ತೀರಿ. ಈ ಫುಟ್‌ಪಾತ್ ಮೇಲೆ ಸಹ ತೆವಳಬಾರದೆನ್ನುತ್ತೀರಿ. ನಮಗಾಗಿ ರಸ್ತೆಯ ಬದಿ ಕೊಂಚ ಸ್ಥಳವನ್ನು ಪ್ರತ್ಯೇಕಿಸಿ ಮೀಸಲಿಡಿ. ನಮಗೂ ಓಡಾಡುವ ಸ್ವಾತಂತ್ರ್ಯ ಬೇಕಲ್ಲವೇ? ಸೈಕ್ಲಿಂಗ್ ಮಾಡುವವರಿಗೆ ಪ್ರತ್ಯೇಕ ಪಥವನ್ನಿರಿಸಿಲ್ಲವೇ?'

'ಇದು ವಾಣಿಜ್ಯ ಸ್ಥಳವೆನ್ನುವುದನ್ನು ಮರೆಯಬೇಡಿ. ದೊಡ್ಡ ಕಂಪನಿಗಳು ನಡೆಸುವ ಬೃಹತ್ ಕಚೇರಿಗಳ ತಾಣವಿದು. ಒಂದೊಂದು ಇಂಚೂ ಬೆಲೆ ಬಾಳುವ ಈ ಜಾಗದಲ್ಲಿ ನೀವು ಓಡಾಡಲು ರಸ್ತೆಯನ್ನು ಬೇಡಿದರೆ ಬಿಟ್ಟುಕೊಡುವವರು ಯಾರು ಜೆಂಟಲ್‌ಮ್ಯಾನ್? ವೃಥಾ ಚರ್ಚೆ ಬೇಡ. ನಿಮ್ಮ ಮನೆಯ ವಿಳಾಸ ಹೇಳಿದರೆ ಅಲ್ಲಿಗೆ ಬಿಡಲು ವ್ಯವಸ್ಥೆ ಮಾಡಿಸುತ್ತೇನೆ. ಮನೆಯ ಬಳಿಯ ಪಾರ್ಕ್‌ನಲ್ಲಿ ಓಡಾಡಿಕೊಂಡಿರಿ. ಇಲ್ಲದಿದ್ದರೆ 'ನಿರಾಶ್ರಿತರ ಕೇಂದ್ರ'ಕ್ಕೆ ನಿಮ್ಮನ್ನು ಸಾಗಿಸಬೇಕಾಗುತ್ತದೆ...'

ಅವಳ ಧ್ವನಿ ಕಡೆಕಡೆಗೆ ಕೊಂಚ ತೀಕ್ಷ್ಣವಾಗಿತ್ತು.

'ಮ್ಯಾಮ್... ನಮ್ಮ ಸ್ವಾತಂತ್ರ್ಯಹರಣ ಮಾಡಲು ನೀವು ಪ್ರಯತ್ನಿಸುತ್ತಿದ್ದೀರಷ್ಟೇ. ನಮ್ಮನ್ನು ನಮ್ಮ ಪಾಡಿಗೆ ಬಿಡಿ.'

'ಇಲ್ಲಿ ನೀವು ತೆವಳಿಕೊಂಡು ಭಿಕ್ಷಾಟನೆಗಿಳಿಯುವುದಿಲ್ಲವೆಂದು ಏನು ಗ್ಯಾರಂಟಿ. ನೀವೇನಾದರು ಈ ರಸ್ತೆ ದಾಟಲು ಪ್ರಯತ್ನಿಸಿದರೆ ನೀವು ತೆಗೆದುಕೊಳ್ಳುವ ಸಮಯಕ್ಕೆ ಸಂಚಾರಿ ಸಿಗ್ನಲ್ ಕಾಯುತ್ತದೇನು? ವಾಹನಗಳ ಸಂಚಾರಕ್ಕೆ ಹಸಿರುನಿಶಾನೆ ತೋರಿಸಿದರೆ ರಸ್ತೆಯ ಮಧ್ಯೆ ಸಿಕ್ಕಿಹಾಕಿಕೊಳ್ಳುವಿರಿ' ಎಂದು ಸೂಕ್ಷ್ಮವಾಗಿ ಎಚ್ಚರಿಸಿದಳು.

'ಮ್ಯಾಮ್, ನಾನೇನು 'ಜೇವಾಕಿಂಗ್' ಮಾಡ್ತಿದ್ದೀನೇನು?' ಎಂದು ಅವಳನ್ನು ನಿರ್ಲಕ್ಷಿಸುತ್ತಾ ರಸ್ತೆ ದಾಟಲು ಹೋದಾಗ, ಪೆಲಿಕಾನ್ ಸಿಗ್ನಲ್ ಜಾರಿಯಲ್ಲಿದ್ದು ಆ ಅಂಗವಿಕಲನಿಗೆ ಸುರಕ್ಷಿತವಾಗಿ ಆಚೆ ಬದಿ ಸೇರಿಸಲು ಅವನೊಂದಿಗೆ ಅವಳೂ ಹೆಜ್ಜೆ ಹಾಕಿದಳು. ರೊಬೋ ಕಾಪ್‌ಗಳಿಗೆ ತಾನು ವಾಪಸ್ಸು ಬರುತ್ತಿರುವುದಾಗಿ ಸೂಚನೆ ನೀಡಿ ನಂತರ ಹಿಂದಿರುಗಿದ್ದಳು. ವಾಣಿಜ್ಯ ತಾಣದಲ್ಲಿ ಹನ್ಸಾಯ ಅತಿ ವೇಗದ ಚಾಲಕರ ಮೇಲೆ ಉಲ್ಲಂಘನೆ ಪ್ರಕರಣಗಳನ್ನು ಒಂದು ಗಂಟೆಗೂ ಅಧಿಕ ಅವಧಿ ದಾಖಲಿಸಿ, ಅವರ ಖಾತೆಯಿಂದ ನೇರವಾಗಿ ಸಂಚಾರ ದಂಡದ ಅಕೌಂಟ್‌ಗೆ ದಂಡದ ಮೊತ್ತ ವರ್ಗಾಯಿಸಿದ ಬಳಿಕ ಜಾಗ ಬದಲಾಯಿಸಿದ್ದಳು..

**ಸಶೇಷ**